# ವಾಟ್ಸ್‌ಆ್ಯಪ್ ಕಾಲದಲ್ಲಿ ಪತ್ರದ ಪ್ರಸ್ತುತತೆ



ನನ್ನ ಗೆಳೆಯನೊಬ್ಬ ಇತ್ತೀಚೆಗೆ ಕರೆ ಮಾಡಿ 'ಒಳ್ಳೊಳ್ಳೆ ಜೋಕ್ಸ್ ಇದ್ರೆ ಕಳ್ಸೋ' ಎಂದು ಕೇಳಿಕೊಂಡ. ನಾನು ನನ್ನ ವಾಟ್ಸ್‌ಆ್ಯಪ್‌ನ ಹಲವು ಗ್ರೂಪುಗಳ ಹಿಸ್ಟರಿಯನ್ನು ಜಾಲಾಡಿ ಸಿಕ್ಕ ಸಿಕ್ಕ ಜೋಕುಗಳನ್ನೆಲ್ಲ ಕಳಿಸಿದೆ. ಅದರಲ್ಲಿ ಕೆಲವನ್ನು ಕಂಡು ಹೌಹಾರಿದ ಅವನು 'ವೆಜ್ ಓನ್ಲಿ' ಎಂದು ಕಂಡೀಷನ್ ಹಾಕಿದ.

ನಂತರ ಸಿಕ್ಕಾಗ ತಿಳಿದ ವಿಷಯವೇನೆಂದರೆ ಅವನಿಗೆ ಆಗತಾನೇ ವಿವಾಹ ಸಂಬಂಧ ಕುದುರಿತ್ತು. ಹಾಗಾಗಿ ಆತ ತನ್ನ ಭಾವೀ ಪತ್ನಿಯನ್ನು ಮೆಚ್ಚಿಸಲು ವಾಟ್ಸ್‌ಆ್ಯಪ್‌ನ ಜೋಕುಗಳಿಗಾಗಿ ನನಗೆ ಬಹುಕಾಲ ಪೀಡಿಸುತ್ತಿದ್ದ.

ಪ್ರೇಮದ ಕುರುಹುಗಳು ಮಿನಾರು, ಮಹಲುಗಳಿಂದ ಮೆಸೇಜಿನವರೆಗೆ ಹರಿದು ಬಂದಿರುವುದು ಕಾಲದ ವಿವಿಧ ಘಟ್ಟಗಳಿಗೆ ಸಾಕ್ಷಿ! ಇವೆಲ್ಲವುಗಳಿಗಿಂತ ಹಿಂದೆ ಬಹುಪಾಲು ಪ್ರೇಮಸಂವಾದಗಳಿಗೆ ಬಳಕೆಯಾದದ್ದು ಮಾತ್ರ ಪತ್ರಗಳೆಂದೇ ಹೇಳಬಹುದು.

ಪತ್ರಗಳೊಂಥರ ಮಾತುಗಳಿಗೆ ಹಿಡಿದ ಜರಡಿಯ ಹಾಗೆ. ಅನ್ನಿಸಿದ್ದನ್ನೆಲ್ಲ, ಅಳೆದೂ ತೂಗಿ, ಪದಗಳನ್ನು ಹೊಂದಿಸಿ ಇರುವ ಅಲ್ಪಸ್ವಲ್ಪ ಸಾಹಿತ್ಯಜ್ಞಾನವನ್ನೆಲ್ಲ ಬಳಸಿ, ಬರೆದು ತಲುಪಿಸುತ್ತಿದ್ದ ಪತ್ರಗಳಲ್ಲಿ ಗೆಳೆಯ/ಗೆಳತಿಯ ಸಕಾರಾತ್ಮಕತೆಯೇ ಹೆಚ್ಚು ಅನಾವರಣಗೊಳ್ಳುತ್ತಿದ್ದವು. ಫೋನುಗಳು ಶುರುವಾದ ಮೇಲೂ ಕೂಡ ಪ್ರೇಮಿಗಳ ಭಾವಸಾಮ್ರಾಜ್ಯದಲ್ಲಿ ಪತ್ರಗಳ ಸ್ಥಾನ ಭದ್ರವಾಗಿದ್ದವು. ಪರಿಚಯದ ಪ್ರಾರಂಭದ ದಿನಗಳಲ್ಲಂತೂ ಫೋನುಗಳಲ್ಲಿ ಅನಗತ್ಯ ಮೌನ ಹಾಗೂ ಮಾತು ತೋಚದ 'ಬೆಬ್ಬೆಬ್ಬೆ'ಗಳು ಪ್ರೇಮಿಗಳನ್ನು ಪೇಚಿಗೆ ಸಿಲುಕಿಸುತ್ತಿದ್ದುದೇ ಜಾಸ್ತಿ. ಅಂಥ ಸಂದರ್ಭಗಳಲ್ಲಿ ಆಪದ್ಬಾಂಧವರಂತೆ ಸಿಗುತ್ತಿದ್ದ ಬಿಳಿಹಾಳೆಗಳು, ಮೊದಲ ನೋಟದ ಬೆರಗಿನಿಂದ ಹಿಡಿದು, ಮಕ್ಕಳಿಗಿಡುವ ಹೆಸರಿನ ತನಕ, ಬೇರೆ ಬೇರೆ ಬಣ್ಣನೆ, ಭಾವನೆ, ಭರವಸೆಗಳೊಂದಿಗೆ ತುಂಬಿ ತುಳುಕಿ ಪ್ರೇಯಸಿ/ಪ್ರಿಯಕರನ ಕೈ ಸೇರುತ್ತಿದ್ದವು.

ಪ್ರೇಮಕಥಾ ಹಂದರದ ಚಿತ್ರಗಳಲ್ಲಿಯೂ ಸಹ ಪ್ರೇಮಪತ್ರಗಳ ರಾಜ್ಯಭಾರ ಜೋರಾಗಿಯೇ ಇತ್ತು. 'ಯಾರೇ ನೀನು ಚೆಲುವೆ' ಚಿತ್ರದ ರಮ್ಯತೆ ಹಾಗೂ 'ಗಾಳಿ ಮಾತು' ಚಿತ್ರದ ಭೀಕರತೆಯಲ್ಲಿ ಪತ್ರಗಳ ಪ್ರಭಾವ ಹಾಸುಹೊಕ್ಕಾಗಿದ್ದವು.

ಫೋನುಗಳ ಎದುರಿಗೂ ಹೋರಾಡಿ ಜಯಿಸಿದ ಪತ್ರಗಳಿಗೆ ಅದೇಕೋ ಸ್ಮಾರ್ಟ್‌ಫೋನುಗಳ ಭರಾಟೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಆಗಲೇ ಇಲ್ಲ. ಫೇಸ್‌ಬುಕ್‌ನ ಪರಿಚಯ, ವಾಟ್ಸ್‌ಆ್ಯಪ್ ಮಾತುಕತೆಗಳಲ್ಲಿನ ಚುರುಕು, ಇಮೋಜಿಗಳ ಮೋಜು, ಫೋಟೊ ಹಂಚಿಕೆಯ ಸೌಕರ್ಯಗಳು ಮತ್ತು ಅತಿಮುಖ್ಯವಾಗಿ, ಬರೆಯುವ ವ್ಯವಧಾನದ ಕೊರತೆಯಿಂದಾಗಿ, ನವಪ್ರೇಮಿಗಳ ಸಂವಹನ ಪ್ರಕ್ರಿಯೆಯಲ್ಲಿ, ಪತ್ರಗಳು ಅಳಿವಿನಂಚಿಗೇ ಸಾಗಿಬಿಟ್ಟವು! ಅಪರೂಪಕ್ಕೊಮ್ಮೆ ಗ್ರೀಟಿಂಗು ಖರೀದಿಸಿದರೂ ಸಹ ಅದರಲ್ಲಿ ಬರೆಯುವುದಕ್ಕೆ ಕೂಡ ಗೂಗಲ್‌ನಲ್ಲಿ ಶುಭಾಶಯ ವಾಕ್ಯಗಳಿಗಾಗಿ ತಡಕಾಡುವುದು ಸರ್ವೇಸಾಮಾನ್ಯವಾಗಿ ಬಿಟ್ಟಿದೆ.

ಸೌಕರ್ಯಗಳು ಹೆಚ್ಚಾದಂತೆ, ಅಂತರ ಕಡಿಮೆಯಾಗಿ, ಆತಂಕಗಳೇ ಹೆಚ್ಚಾಗಿರುವುದು ಇಂದಿನ ವಾಟ್ಸ್‌ಆ್ಯಪ್ ಪ್ರೇಮಸಂಭಾಷಣೆಗಳ ಋಣಾತ್ಮಕತೆಯೆಂದೇ ಹೇಳಬಹುದು. ಎಷ್ಟೇ ಪ್ರೇಮವಿದ್ದರೂ ಖಾಸಗಿತನಕ್ಕೆ ಧಕ್ಕೆತರುವ ಸಂದರ್ಭಗಳು ಎದುರಾಗುವುದೇ ಇದರ ಅನಾನುಕೂಲವೆಂಬುದು ಸತ್ಯ. ಗುಡ್ ಮಾರ್ನಿಂಗ್ ಪಕ್ಕ ಎರಡು ಹೂವೋ ಅಥವಾ ತುಟಿಯನ್ನು ಓರೆಮಾಡಿ ಚುಂಬಿಸುವಂಥ ಇಮೋಜಿಗಳಿಂದ ಶುರುವಾಗುವ ಪ್ರೇಮಪೀಠಿಕೆಗಳು ಕೊನೆ ಕೊನೆಗೆ, ಆನ್‌ಲೈನ್‌ನಲ್ಲಿದ್ರೂ ರಿಪ್ಲೈ ಮಾಡ್ತಿಲ್ಲ, ನೋಡಿಯೂ ಮಾತಾಡ್ತಿಲ್ಲ ಎನ್ನುವ ಕೊಂಕುಗಳಿಗೆ ಬಹುಬೇಗ ತಲುಪುತ್ತಿವೆ. ಪತ್ರಗಳ ಸೆಲೆಕ್ಟಿವಿಟಿಯ ಸೌಂದರ್ಯ ವಾಟ್ಸ್‌ಆ್ಯಪ್‌ನ ಮಿತಿಮೀರಿದ ಸಂಭಾಷಣೆಗಳಿಗೆ ಇನ್ನೂ ದಕ್ಕಿಲ್ಲವೆಂದೇ ಹೇಳಬಹುದು.

ಜೋಕನ್ನು ಕಳಿಸೆಂದು ದುಂಬಾಲುಬಿದ್ದ ಉದಯೋನ್ಮುಖ ಪ್ರೇಮಿ ಇತ್ತೀಚೆಗೆ ಸಿಕ್ಕಾಗ ಅವನ ಪ್ರೇಮಜೀವನದ ಬಗ್ಗೆ ಕೇಳಿದೆ. 'ಸೆಟ್ಟಾಗಲ್ಲ ಮಗ! ಬಿಟ್ಬಿಟ್ಟೆ' ಎಂಬ ಉತ್ತರ ಬಂತು. ಸಹಜವಾಗಿಯೇ 'ಏಕೆ?' ಎಂದಾಗ ಆಕೆ ತನ್ನ ಆಫೀಸಿನವರೊಂದಿಗೆ ಪ್ರವಾಸ ಹೋದಾಗ ತೆಗೆಸಿಕೊಂಡ ಕೆಲವು ಫೋಟೊಗಳನ್ನು ಅವಳ ಸ್ಟೇಟಸ್ಸಿನಲ್ಲಿ ನೋಡಿ ಜಗಳವಾಡಿದನಂತೆ. ಅದೇ ಮುಂದುವರಿದು ಸಂಬಂಧ ಮುರಿದಿತ್ತು.

ನಾಗೇಂದ್ರ ಎಚ್.ಎಸ್.



ಹರಿಯುವುದು, ಮುರಿಯುವುದು, ಅಣೆಕಟ್ಟು ಕಟ್ಟಿ ಮುಳುಗಿಸುವುದು ಎಲ್ಲದಕ್ಕೂ ಇವೇ ಸಾಕ್ಷಿಯೂ ಸಾಧನವೂ ಆಗಿರುತ್ತವೆ.

## ವಿರಹಕ್ಕೆಲ್ಲಿದೆ ಅವಕಾಶ?

ಬಯಸಿದ್ದು ಬಯಸಿದಾಗೆಲ್ಲ ಸಿಕ್ಕರೆ ಅದರ ಬೆಲೆ ತಿಳಿಯುವುದಿಲ್ಲ ಎಂಬ ಮಾತಿದೆ. ಇದನ್ನೇ ಪ್ರೇಮಕ್ಕೆ ಅನ್ವಯಿಸಿ 'ವಿರಹದಲ್ಲೇ ಪ್ರೇಮ ಮಾಗುವುದು' ಎಂದೂ ಹೇಳುವುದಿದೆ. ವಿರಹ, ವಿಪ್ರಲಂಭ ಹೀಗೆ ಸಂಗಾತಿಯಿಂದ ದೂರವಾಗುವ ನೋವನ್ನೇ ಇಟ್ಟುಕೊಂಡು ನಮ್ಮ ಅಕ್ಷರಲೋಕದಲ್ಲಿಯೂ ಹಲವು ಮಹತ್ಕೃತಿಗಳು ಹುಟ್ಟಿವೆ.

ಆದರೆ ಇಂದಿನ ಆಧುನಿಕ ಪ್ರೇಮ ಪರಿಕರಗಳು ಈ 'ದೂರ'ವನ್ನು ವರ್ಚುವಲ್ ದಾರಿಯ ಮೂಲಕ ಹತ್ತಿರಗೊಳಿಸಿವೆ. ನೆನಪಾದಾಗೆಲ್ಲ ಬೆರಳ ತುದಿಗೆ ಮೂಡುವ, ಬಯಸಿದಾಗೆಲ್ಲ ಮಾತಿಗೆ ಸಿಕ್ಕುವ, ಡಾಟಾ ಮುಗಿಯುವವರೆಗೂ ಕಣ್ಣೋಟಕ್ಕೂ ದಕ್ಕುವ ಸಂಗಾತದ ಇಂದಿನ ಪ್ರೇಮ ಮಾಗುವುದು ಎಲ್ಲಿ? ಆಧುನಿಕ ಪರಿಕರಗಳು ಇಂದಿನ ಪ್ರೇಮದ ಸ್ವರೂಪ ವ್ಯಾಖ್ಯಾನಗಳನ್ನೂ ಬದಲಿಸಿವೆಯೇ? ಉತ್ತರ ಹೇಳುವುದು ಸುಲಭವಲ್ಲ. ಅಪ್ಪ ಅಮ್ಮ